ಈ) ಹೊಸ ಶಾಲಾ ಸಂಕೀರ್ಣದಲ್ಲಿ ಶಾಲಾ ಕಟ್ಟಡದಲ್ಲಿ ಹೆಣ್ಣು ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕವಾದ ವಸತಿ ಗೃಹ ಹಾಗೂ ಅಡಿಗೆ ಮನೆ, ಬೋಜನಾ ಶಾಲಾ ಕಟ್ಟಡ ನಿರ್ಮಿಸಲಾಗಿದೆ. ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ವಸತಿ ಗೃಹಗಳನ್ನು ನಿರ್ಮಿಸಿರುವುದಿಲ್ಲ. ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ವಸತಿ ಗೃಹಗಳನ್ನು ಎರಡನೇ ಹಂತದಲ್ಲಿ ನಿರ್ಮಿಸಲು ಅಂದಾಜುಪಟ್ಟಿ ತಯಾರಿಸಲಾಗುತ್ತಿದೆ.

**ಪಡಿತರ ಚೀಟಿಗಳನ್ನು ನವೀಕರಿಸುವುದು**

**1681 (2625); ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು)**

ಅ) ಪಡಿತರ ಚೀಟಿಗಳನ್ನು ಹೊಸದಾಗಿ ಪಡೆಯಲು ಮತ್ತು ಇರುವ ಪಡಿತರ ಚೀಟಿಗಳನ್ನು ನವೀಕರಣ ಮಾಡಲು ಎಸ್.ಎಂ.ಎಸ್. ಮಾಡುವ ಹೊಸ ಪದ್ಧತಿಯನ್ನು ಸರ್ಕಾರ ಜಾರಿಗೆ ತಂದಿದೆಯೇ ಹಾಗೂ ಕಡ್ಡಯ ಗೊಳಿಸಲಾಗಿದೆಯೇ?

ಆ) ಈ ವ್ಯವಸ್ಥೆಯನ್ನು ಜಾರಿಗೆ ತಂದಿದ್ದಲ್ಲಿ, ಗ್ರಾಮೀಣ ಪ್ರದೇಶದ ಬಡ ಜನರು ಸರ್ಕಾರದ ಸೌಲಭ್ಯವನ್ನು ಪಡೆಯಲು ಎಸ್ಎಂಎಸ್ ಮಾಡ ಲೇಬೇಕಾದ ಅನಿವಾರ್ಯತೆ ಸೃಷ್ಟಿಯಾಗಲಿದ್ದು, ಗ್ರಾಮೀಣ ಜನತೆಗೆ ಮೊಬೈಲ್ ಬಳಸಿ ಎಸ್ಎಂಎಸ್ ಮಾಡುವ ತಂತ್ರಜ್ಞಾನ ಗೊತ್ತಿಲ್ಲದೇ ಇರುವುದರಿಂದ ಜನರು ಪಡಿತರ ಚೀಟಿ ಸೌಲಭ್ಯ ಪಡೆದುಕೊಳ್ಳಲು ತೊಂದರೆ ಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಸಾರ್ವಜನಿಕರಿಗೆ ಸರಳ ರೀತಿಯಲ್ಲಿ ಪಡಿತರ ಚೀಟಿ ಸಿಗವಂತೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳಲಿದೆಯೇ?

**ಶ್ರೀ ದಿನೇಶ್ ಗುಂಡೂರಾವ್ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಸಚಿವರು)**

ಅ) ಹೌದು, ಪಡಿತರ ಚೀಟಿಗಾಗಿ ಆನ್‌ಲೈನ್ ಅರ್ಜಿ ಸಲ್ಲಿಸುವ ಪೂರ್ವದಲ್ಲಿ ಅರ್ಜಿದಾರರು ಎಸ್ಎಂಎಸ್ ಮೂಲಕ ಒಂದು ಸುರಕ್ಷತಾ

ಕೋಡ್‌ನ್ನು ಪಡೆಯಲಯ ನಗರ ಪ್ರದೇಶದಲ್ಲಿ ಎಸ್‌ಎಂಎಸ್ ಪದ್ಧತಿ ಜಾರಿಗೊಳಿಸಿದೆ. ಗ್ರಾಮಾಂತರ ಪ್ರದೇಶದಲ್ಲಿ ನೇರವಾಗಿ ಅರ್ಜಿಯನ್ನು ಗ್ರಾಮ ಪಂಚಾಯಿತಿಯಲ್ಲಿ ನೀಡಬಹುದಾಗಿದೆ.

2010ರ ಪೂರ್ವದ ಖಾಯಂ ಪಡಿತರ ಚೀಟಿ ನವೀಕರಣ ಮಾಡುವ ಸಂಬಂಧವಾಗಿ ನಗರ/ಪಟ್ಟಣ ಪ್ರದೇಶದ ಪಡಿತರ ಚೀಟಿದಾರರು ಎಸ್‌ಎಂಎಸ್ ಮಾಡಬೇಕಾಗಿದ್ದು, ಉಳಿದಂತೆ ಗ್ರಾಮೀಣ ಪ್ರದೇಶದ ಪಡಿತರ ಚೀಟಿದಾರರು ನವೀಕರಣಕ್ಕೆ ಎಸ್‌ಎಂಎಸ್ ಕಳುಹಿಸುವ ಅಗತ್ಯ ಇರುವುದಿಲ್ಲ. ನೇರವಾಗಿ ಗ್ರಾಮ ಪಂಚಾಯಿತಗೆ ಹೋಗಿ ಪಡಿತರ ಚೀಟಿ ನವೀಕರಿಸಿ ಕೊಳ್ಳಬಹುದಾಗಿದೆ.

ಆ) ಅನ್ವಯಿಸುವುದಿಲ್ಲ.

**ಪಡಿತರ ಚೀಟಿಗಳನ್ನು ರದ್ದುಪಡಿಸುವುದು**

**1682 (2626); ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು)**

ಅ) ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನ 1000ಕ್ಕೂ ಹೆಚ್ಚು ಪಡಿತರ ಚೀಟಿಗಳನ್ನು ಕುಟುಂಬದ ಪುರುಷ ಯಜಮಾನರ ಭಾವಚಿತ್ರ ಇಲ್ಲದೇ ಇರುವ ಕಾರಣದಿಂದ ರದ್ದುಪಡಿಸಲು ಇಲಾಖೆ ಮುಂದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರೀತಿ ಪಡಿತರ ಚೀಟಿಗಳನ್ನು ರದ್ದುಪಡಿಸಲು ಕಾರಣಗಳೇನು;

ಇ) ಈ ಬಗ್ಗೆ ಸರ್ಕಾರದ ನಿಯಮಾವಳಿಗಳನ್ನು ರಚಿಸಿದೆಯೇ?

**ಶ್ರೀ ದಿನೇಶ್ ಗುಂಡೂರಾವ್ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಸಚಿವರು)**

ಅ) ಪಡಿತರ ಚೀಟಿಯಲ್ಲಿ ಕುಟುಂಬದ ಪುರುಷ ಯಜಮಾನರ ಭಾವಚಿತ್ರ ಇಲ್ಲದೇ ಇರುವ ಕಾರಣದಿಂದ ರದ್ದುಪಡಿಸಲು ಕ್ರಮವಹಿಸಿರುವುದಿಲ್ಲ.

ಆ) ಅನ್ವಯಿಸುವುದಿಲ್ಲ.